**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ: ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.115/2020**

| | | |
|---|---|---|
| ಸಾಕ್ಷಿದಾರರ ಹೆಸರು | : ರಿಗಬ ರಾಮ್ | ಫ್ರಾಸಾ - 5 |
| ತಂದೆಯ ಹೆಸರು | : ಸುಜಾ ರಾಮ್ | ಚಾಸಾ- 7 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಿನ್ನದ ವ್ಯಾಪಾರ | ದಿನಾಂಕ:04.11.2024 |
| ವಾಸಸ್ಥಳ | : ಗೌರಿಬಿದನೂರು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯ ಪರಿಚಯ ನನಗೆ ಇಲ್ಲ.

ಸಾಕ್ಷಿಯು ದಿನಾಂಕ.05.11.2020 ರ ಮಹಜರಿನಲ್ಲಿ ತಮ್ಮ ಸಹಿಯನ್ನು ಹಾಗೂ 2 ಪೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರನ್ನು ನಿಪಿ-26, ಸಾಕ್ಷಿಯ ಸಹಿಯನ್ನು ನಿಪಿ-26(ಎ), ಪೋಟೋಗಳನ್ನು ನಿಪಿ-27 ಮತ್ತು 28 ಎಂದು ಗುರುತಿಸಲಾಯಿತು.

ಕೆಲ ವರ್ಷಗಳ ಹಿಂದೆ ನಾನು ನನ್ನ ಅಂಗಡಿಯಲ್ಲಿ ಇದ್ದಾಗ ಪೊಲೀಸರು ಬಂದು ನನ್ನ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ನನ್ನ ಸಹಿಗಳನ್ನು ಪಡೆದು, ಪೋಟೋ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ. ನಿಪಿ-26 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಪರಿಚಯ ನನಗೆ ಇಲ್ಲ. ಅವರನ್ನು ನಾನು ಈ ಹಿಂದೆ ನೋಡಿಲ್ಲ. ನಿಪಿ-27 ರಲ್ಲಿ ಕಾಣುವ ವಸ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನಿಂದ ಎನನ್ನು ವಶಕ್ಕೆ ಪಡೆದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.09.01.2020 ರಂದು ಕಳಸ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-29 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.